ದಿನಾಂಕಃ 04-08-2023 ಸಾಕ್ಷಿಯನ್ನು ಈ ದಿನ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರಿದ ಪ್ರತಿವಾದಿಯ ಮುಖ್ಯ ವಿಚಾರಣೆಃಶ್ರೀ. ಕೆ.ಎನ್.ಎಸ್. ವಕೀಲರಿಂದಃ**

ದಿನಾಂಕ 11-02-2008 ರಂದು ದಾವಾ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದ ಕ್ರಯಪತ್ರವನ್ನು ಹಾಜರು ಮಾಡಿದ್ದು ಅದನ್ನು ರುಜುವಾತಿಗೆ ಒಳಪಟ್ಟು ನಿ.ಡಿ. 5 ಎಂದು ಗುರುತಿಸಲಾಯಿತು. ದಾವಾ ಅನುಸೂಚಿ ಸ್ವತಿಗೆ ಸಂಬಂಧಿಸಿದಂತೆ ಮೂಲ ಸಾಗುವಳಿ ಚೀಟಿಯನ್ನು ಹಾಜರು ಮಾಡಿದ್ದು ಅದನ್ನು ನಿ.ಡಿ. 6 ಎಂದು ಗುರುತಿಸಲಾಯಿತು. ತಹಶೀಲ್ದಾರ ರವರ ಕಚೇರಿಯಿಂದ ದಾವಾ ಎ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ನಮೂನೆ 111 ರಲ್ಲಿ ನೀಡಿದ ನಿರಾಪೇಕ್ಷ ಪತ್ರವನ್ನು ಹಾಜರು ಮಾಡಿದ್ದು ಅದನ್ನು ನಿಡಿ.7 ಎಂದು ಗುರುತಿಸಲಾಯಿತು. ಮೃತ ವಾದಿ ಕಾಶ್ಮೀರಿ ಡಿ ಸೋಜಾರವರು ನನ್ನ ತಂದೆ ಪುಕ್ಕಪ್ಪ ಗೌಡರವರಿಗೆ ನೀಡಿದ ಸಾಮಾನ್ಯ ಅಧಿಕಾರ ಪತ್ರವನ್ನು ಹಾಜರು ಮಾಡಿದ್ದು ಅದನ್ನು ನಿ.ಡಿ.8 ಎಂದು, ಮೃತ ವಾದಿ ಕಾಶ್ಮೀರಿ ಡಿ ಸೋಜಾರವರ 3 ಸಹಿಗಳನ್ನು ಒಟ್ಟಾಗಿ ನಿ.ಡಿ.8(ಎ) ಎಂದು ರುಜುವಾತಿಗೆ ಒಳಪಟ್ಟು ಗುರುತಿಸಲಾಯಿತು. ದಾವಾ ಅನುಸೂಚಿ ಸ್ವತ್ತಿ ಗೆ ಸಂಬಂಧಿಸಿದ ನಕಾಶೆಯನ್ನು ಹಾಜರುಮಾಡಿದ್ದು ಅದನ್ನು ನಿ.ಡಿ . 9 ಎಂದು ರುಜುವಾತಿಗೆ ಒಳಪಟ್ಟು ಗುರುತಿಸಲಾಯಿತು. FMB ನಕಾಶೆಯನ್ನು ಹಾಜರು ಮಾಡಿದ್ದು ಅದನ್ನು ನಿ.ಡಿ.10 ಎಂದು ಗುರುತಿಸಲಾಯಿತು. ದಾವಾ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದ ದಿನಾಂಕ 23-09-2014 ರಂದು ಅಲಂಕಾರು ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಮಾಡಿರುವ ಅಡಮಾನ ಪತ್ರವನ್ನು ನಿಡಿ.11 ಎಂದು ಗುರುತಿಸಲಾಯಿತು. ದಿನಾಂಕ 21-05-1990 ರಂದು ದಾವಾ ಆಸ್ತಿಗೆ ಸಂಬಂಧಿಸಿದಂತೆ ಮೃತ ವಾದಿ ಕಾಶ್ಮೀರ ಡಿ ಸೋಜಾರವರು ನನ್ನ ತಂದೆ ಪುಕ್ಕಪ್ಪ ಗೌಡರವರಿಗೆ ಮಾಡಿಕೊಟ್ಟ ಕರಾರು ಪತ್ರವನ್ನು ರುಜುವಾತಿಗೆ ಒಳಪಟ್ಟು ನಿಡಿ.12 ಎಂದು, ನನ್ನ ತಂದೆಯ ಸಹಿಯನ್ನು ನಿ.ಡಿ.12(ಎ) ಎಂದು, ಮೃತ ವಾದಿ ಕಾಶ್ಮೀರ ಡಿ ಸೋಜಾರವರ ಸಹಿಯನ್ನು ನಿ.ಡಿ.12(ಬಿ) ಎಂದು ರುಜುವಾತಿಗೆ ಒಳಪಟ್ಟು ಗುರುತಿಸಲಾಯಿತು. ದಿನಾಂಕ 07-07-2023 ರಂದು ಅಲಂಕಾರು ಕೃಷಿ ಪತ್ತಿನ ಸಹಕಾರ ಸಂಘದವರು ನೀಡಿದ ಹಿಂಬರವನ್ನು ನಿ. ಡಿ.13 ಎಂದು

ಗುರುತಿಸಲಾಯಿತು.

ನಿ.ಡಿ.6 ನನ್ನ ತಂದೆಗೆ ಮೃತ ವಾದಿ ಕಾಶ್ಮೀರಿ ಡಿ ಸೋಜರವರು ನೀಡಿರುತ್ತಾರೆ. ನಿ,ಡಿ.8 ರಲ್ಲಿ ರಾಘವ ವಕೀಲರು ದೃಢೀಕರಿಸಿರುತ್ತಾರೆ. ಅದರಲ್ಲಿ ಸಾಕ್ಷಿದಾರರಾಗಿ ನಾರಾಯಣ ಭಟ್ ವಕೀಲರು ಸಹಿ ಹಾಕಿರುತ್ತಾರೆ. ನಿ.ಡಿ.12 ಕರಾರು ಪತ್ರಕ್ಕೆ ಸಾಕ್ಷಿದಾರರಾಗಿ ನಾರಾಯಣ ಗೌಡ ಕೆದಂಬಾಡಿ ಮತ್ತು ಶಿವಪ್ಪ ಗೌಡ ಪುತ್ತೂರು ರವರು ಸಹಿ ಮಾಡಿರುತ್ತಾರೆ. ನಿ.ಡಿ.6 ನ್ನು ಅಲಂಕಾರ ಸಹಕಾರ ಬ್ಯಾಂಕಿನಲ್ಲಿ ಅಡಮಾನ ಮಾಡಿ ಸಾಲ ಪಡೆದಿರುತ್ತೇವೆ.

ಆದ್ದರಿಂದ ಮಾನ್ಯ ನ್ಯಾಯಾಲಯವು ವಾದಿಯ ದಾವೆಯನ್ನು ಖರ್ಚು ಸಮೇತ ವಜಾ ಮಾಡಬೇಕಾಗಿ ಪ್ರಾರ್ಥನೆ.

ಮರು ವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ, ಹೇಳಿ, ಕೇಳಿ, ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ
ದರ್ಜೆ ನ್ಯಾಯಿಕ ದಂಡಾಧಿಕಾರಿ, ಪುತ್ತೂರು, ದ.ಕ.